
34

ನಾಸ್ತಿಕತೆ



ನಿರ್ವಹಿಸುವುದು ಹೇಗೆ?

مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

“ಅದು ಸತ್ಯವೆಂದು ಅವರಿಗೆ
ಸ್ಪಷ್ಟವಾಗುವವರೆಗೆ, ನಾವು ನಮ್ಮ
ದೃಷ್ಟಾಂತಗಳನ್ನು ದಿಗಂತಗಳಲ್ಲಿ
ಮತ್ತು ಸ್ವತಃ ಅವರ ದೇಹದಲ್ಲಿ
ಅವರಿಗೆ ತೋರಿಸಿಕೊಡುವೆವು.”

(ಕುರ್‌ಆನ್ 41:53)

ಈ ಲೇಖನವು ದೇವವಿಶ್ವಾಸದ ಬಗ್ಗೆಯಿರುವ ಇಸ್ಲಾಮೀ ದೃಷ್ಟಿಕೋನವನ್ನು ಪರಿಚಯಿಸುತ್ತದೆ. ದೇವನು ತನ್ನ ಅಸ್ತಿತ್ವದ ದೃಷ್ಟಾಂತಗಳನ್ನು, ಅವನ ನೈಸರ್ಗಿಕ ಸೃಷ್ಟಿಯ ಮೂಲಕ ಮತ್ತು ಗ್ರಂಥಗಳ ಅವತೀರ್ಣದ ಮೂಲಕ ಹೇಗೆ ಒದಗಿಸುತ್ತಾನೆ ಎನ್ನುವುದನ್ನು ವಿವರಿಸುತ್ತದೆ ಮತ್ತು ನಾಸ್ತಿಕರು ಕೇಳುವಂತಹ ಕೆಲವು ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಿಸುತ್ತದೆ.

ತನ್ನನ್ನು ತನ್ನ ದೃಷ್ಟಾಂತಗಳ ಮೂಲಕ ಅರಿತು, ಅಂಗೀಕರಿಸಿ, ತನಗೆ ವಿಧೇಯವಾಗಿ ಬದುಕಬೇಕೆಂದು ದೇವನು ನಮ್ಮನ್ನು ಆಮಂತ್ರಿಸುತ್ತಾನೆ. ಅವನು ಯಾರೆಂದು ತಿಳಿಯುವುದಕ್ಕಾಗಿ ಆಲೋಚನೆ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ಕೆಲವು ಜನರು ದೇವನ ದೃಷ್ಟಾಂತಗಳ ಮೂಲಕ ಅವನ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತಾರೆ. ಇತರರು ಎಲ್ಲವನ್ನೂ ಯಾದೃಚ್ಛಿಕ ಮತ್ತು ಅರ್ಥಹೀನವೆಂದು ಹೇಳಿ ತಳ್ಳಿಹಾಕುತ್ತಾರೆ. ದೇವನಲ್ಲಿ ನಂಬಿಕೆಯಿಡಬೇಕೆಂಬ ಸ್ವಾಭಾವಿಕ ಒಲವನ್ನು ದೇವನು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರಿಸಿದ್ದಾನೆ. ನಂಬಿಕೆಯಿಡಬೇಕೆನ್ನುವ ಈ ಸಹಜ ಪ್ರವೃತ್ತಿಯನ್ನು ಪೋಷಿಸಲು ಸಾಧ್ಯವಿದೆ, ಅದೇ ರೀತಿ ಅದನ್ನು ನಿಗ್ರಹಿಸಲೂ ಸಾಧ್ಯವಿದೆ.

ದೇವನ ಮಾರ್ಗದರ್ಶನ ಪಡೆಯಲು ಪ್ರಾಮಾಣಿಕ ಬಯಕೆಯನ್ನು ಹೊಂದಿರುವ ಮತ್ತು ಅದಕ್ಕಾಗಿ ಸಿದ್ಧ-

ರಿರುವ ಜನರಿಗೆ ದೇವನು ಮಾರ್ಗದರ್ಶನ ನೀಡುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ದೇವನಲ್ಲಿ ನಂಬಿಕೆಯಿಡಲು ಇಷ್ಟವಿಲ್ಲದವರಿಗೆ ದೇವನು ಮಾರ್ಗದರ್ಶನ ನೀಡುವುದಿಲ್ಲ. ದೇವನು ಹೇಳುತ್ತಾನೆ,

> "ತನ್ನ ಕಡೆಗೆ ತಿರುಗುವವನಿಗೆ ಅಲ್ಲಾಹು (ದೇವನು) ಮಾರ್ಗದರ್ಶನ ಮಾಡುತ್ತಾನೆ." (ಕುರ್‌ಆನ್ 13:27)

ದೇವನ ಅಸ್ತಿತ್ವದ ಬಗ್ಗೆ ಚಿಂತಿಸುವಾಗ ವಸ್ತುನಿಷ್ಠತೆ ಮತ್ತು ಪಕ್ಷಪಾತವಿಲ್ಲದ ಮನೋಭಾವ ಹೊಂದಿರಬೇಕಾದುದು ಅತ್ಯಗತ್ಯ. ಕೆಲವು ಜನರಿಗೆ ಇದು ಸಾಕಷ್ಟು ಮುಜುಗರದ ಸಂಗತಿಯಾಗಿ ಕಾಣುತ್ತದೆ. ಆದರೆ ಮುಕ್ತ ಮನಸ್ಸು ಮತ್ತು ಮುಕ್ತ ಇಚ್ಛೆ ಇಲ್ಲದಿದ್ದರೆ, ಯಾವುದೇ ಲೇಖನದಿಂದಲೂ, ಯಾವುದೇ ಮಾಹಿತಿಯಿಂದಲೂ ಯಾರನ್ನೂ ವಿಶ್ವಾಸಿಯನ್ನಾಗಿ ಮಾಡಲು ಸಾಧ್ಯವಿಲ್ಲ.

ಯಾರು ಅಹಂಕಾರ ಮತ್ತು ಗರ್ವದಿಂದ ದೇವನ ದೃಷ್ಟಾಂತಗಳನ್ನು ಸಮೀಪಿಸುತ್ತಾರೋ ಅವರಿಗೆ ಅದು ಅವರ ಸತ್ಯನಿಷೇಧವನ್ನು ಇನ್ನಷ್ಟು ಸಮರ್ಥಿಸಲು ಮಾತ್ರ ಸಹಾಯಕವಾಗುತ್ತದೆ. ಆದ್ದರಿಂದ, ಪ್ರಾಮಾಣಿಕ, ಮುಕ್ತ ಮನಸ್ಸಿನ ಮತ್ತು ಸತ್ಯನ್ವೇಷಕ ಮನೋಭಾವದಿಂದ ಈ ಲೇಖನವನ್ನು ಓದುವವರು ಇದರಿಂದ ಪ್ರಯೋಜನ ಪಡೆಯುವರು. ಅವರಿಗೆ ದೇವರನ್ನು ಅರ್ಥಮಾಡಿಕೊಳ್ಳಲು ಇದು ಸಹಾಯಕವಾಗಬಹುದೆಂದು ನಾವು ಭಾವಿಸುತ್ತೇವೆ.

ನಂಬಿಕೆಯಿಡಲು ಬೇಕಾದ ಕಾರಣಗಳು

ಒಬ್ಬ ಸೃಷ್ಟಿಕರ್ತನಲ್ಲಿ ನಂಬಿಕೆಯಿಡಲು ಮೂರು ತರ್ಕಬದ್ಧ ಕಾರಣಗಳಿವೆ.

1. ಬ್ರಹ್ಮಾಂಡದ ಆರಂಭ

ಸೃಷ್ಟಿಕರ್ತನ ಅಸ್ತಿತ್ವವನ್ನು ಸೂಚಿಸುವ ಮೊದಲ

ಪುರಾವೆ ಬ್ರಹ್ಮಾಂಡದ ಮೂಲವನ್ನು ಅರ್ಥಮಾಡಿಕೊಳ್ಳುವುದು. ಮರುಭೂಮಿಯಲ್ಲಿ ನಡೆಯುತ್ತಾ ಸಾಗುವಾಗ ನಿಮಗೆ ಒಂದು ಕೈಗಡಿಯಾರ ಸಿಕ್ಕಿತೆಂದು ಕಲ್ಪಿಸಿಕೊಳ್ಳಿ. ಕೈಗಡಿಯಾರವು ಗಾಜು, ಪ್ಲಾಸ್ಟಿಕ್ ಮತ್ತು ಲೋಹದಿಂದ ನಿರ್ಮಿತವಾಗಿದೆ ಎಂದು ನಮಗೆ ತಿಳಿದಿದೆ. ಗಾಜನ್ನು ಮರಳಿನಿಂದ ಮತ್ತು ಪ್ಲಾಸ್ಟಿಕ್ಕನ್ನು ಎಣ್ಣೆಯಿಂದ ತಯಾರಿಸಲಾಗುತ್ತದೆ. ಲೋಹವನ್ನು ಭೂಮಿಯಿಂದ ಹೊರತೆಗೆಯಲಾಗುತ್ತದೆ. ಈ ಮೂರೂ ಘಟಕಗಳು ಮರುಭೂಮಿಯಲ್ಲಿ ಲಭ್ಯವಿದೆ. ಹಾಗಾದರೆ, ಕೈಗಡಿಯಾರ ಸ್ವಯಂ ನಿರ್ಮಾಣವಾಯಿತು ಎಂದರೆ ಅದನ್ನು ನೀವು ನಂಬುತ್ತೀರಾ?

ಸೂರ್ಯ ಬೆಳಗಿ, ಗಾಳಿ ಬೀಸಿ, ಮಿಂಚು ಬಡಿದು, ತೈಲವು ಗುಳ್ಳೆಯಾಗಿ ಭೂಮಿಯ ಮೇಲ್ಮೈಗೆ ಬಂದು ಮರಳು ಮತ್ತು ಲೋಹದೊಂದಿಗೆ ಮಿಶ್ರವಾಗಿ ಲಕ್ಷಾಂತರ ವರ್ಷಗಳ ನಂತರ ಕೈಗಡಿಯಾರವು ಯಾದೃಚ್ಛಿಕ

ಅಥವಾ ನೈಸರ್ಗಿಕ ಕಾಕತಾಳೀಯಗಳ ಕಾರಣದಿಂದ ನಿರ್ಮಾಣವಾಯಿತು ಎಂದರೆ ನೀವು ನಂಬುತ್ತೀರಾ?

ಹಾಗಾದರೆ ಈ ಬ್ರಹ್ಮಾಂಡದ ಬಗ್ಗೆ ನಿಮ್ಮ ಅಭಿಪ್ರಾಯ-ವೇನು? ಆಧುನಿಕ ವಿಜ್ಞಾನದ ಪ್ರಕಾರ, ಬ್ರಹ್ಮಾಂಡಕ್ಕೆ ಮಿತಿ ಇದೆ ಮತ್ತು ಅದಕ್ಕೆ ಒಂದು ಆರಂಭವೂ ಇದೆ.

> "ಅವರನ್ನು ಅಸ್ತಿತ್ವದಲ್ಲಿಲ್ಲದ ವಸ್ತುವಿನಿಂದ ಸೃಷ್ಟಿ-ಸಲಾಯಿತೇ ಅಥವಾ ಅವರನ್ನು ಅವರೇ ಸೃಷ್ಟಿಸಿ-ಕೊಂಡರೇ?" (ಕುರ್‌ಆನ್ 52: 35-6)

ಅಂತಿಮವಾಗಿ ಬ್ರಹ್ಮಾಂಡವು ಬಂದದ್ದಾದರೂ ಎಲ್ಲಿಂದ? ಮಾನವನ ಅನುಭವ ಮತ್ತು ಸರಳ ತರ್ಕವು ನಮಗೆ ತಿಳಿಸಿಕೊಡುವ ಪ್ರಕಾರ ಆರಂಭವ-ನ್ನು ಹೊಂದಿರುವ ಒಂದು ವಸ್ತು ಅಸ್ತಿತ್ವದಲ್ಲೇ ಇಲ್ಲದ ಒಂದು ವಸ್ತುವಿನಿಂದ ಉಂಟಾಗುವುದಿಲ್ಲ. ಹಾಗೆಯೇ ಯಾವುದೇ ವಸ್ತುವಿಗೂ ಸ್ವತಃ ತನ್ನನ್ನು ತಾನೇ ಸೃಷ್ಟಿಸ-

ಲೂ ಸಾಧ್ಯವಿಲ್ಲ.

ಕೈಗಡಿಯಾರದ ಅಸ್ತಿತ್ವದ ಹಿಂದೆ ಒಬ್ಬ ತಯಾರಕನ ಅಸ್ತಿತ್ವವನ್ನು ನಾವು ನಿರಾಕರಿಸುವುದಿಲ್ಲವಾದರೆ ಈ ಸಂಕೀರ್ಣ ಬ್ರಹ್ಮಾಂಡದ ಅಸ್ತಿತ್ವದ ಹಿಂದೆ ಒಬ್ಬ ತಯಾರಕನ ಅಸ್ತಿತ್ವವನ್ನು ನಾವು ಹೇಗೆ ತಾನೇ ನಿರಾಕರಿಸಲು ಸಾಧ್ಯ? ಒಂದು ಶ್ರೇಷ್ಠ "ಅಸ್ತಿತ್ವ"ವು ಬ್ರಹ್ಮಾಂಡವನ್ನು ಸೃಷ್ಟಿಸಿತು ಎಂದು ನಾವು ಅಂಗೀಕರಿಸಲೇಬೇಕಾಗಿದೆ. ಇಡೀ ಬ್ರಹ್ಮಾಂಡವನ್ನು ಅಸ್ತಿತ್ವಕ್ಕೆ ತಂದು ಅದನ್ನು ನಿಯಂತ್ರಿಸುವ 'ವೈಜ್ಞಾನಿಕ ನಿಯಮಗಳನ್ನು' ರಚಿಸಿದ ಆ "ಅಸ್ತಿತ್ವ"ವು ನಿಜವಾಗಿಯೂ ಶಕ್ತಿಶಾಲಿ ಮತ್ತು ಬುದ್ಧಿವಂತ ಆಗಿರಲೇಬೇಕು. ಆ "ಅಸ್ತಿತ್ವ"ವು ಸಮಯರಹಿತ ಮತ್ತು ಸ್ಥಳರಹಿತವೂ ಆಗಿರಬೇಕಾಗಿದೆ. ಏಕೆಂದರೆ ಸಮಯ, ಸ್ಥಳ ಮತ್ತು ವಸ್ತು ಉಂಟಾದುದು ಬ್ರಹ್ಮಾಂಡದ ಸೃಷ್ಟಿಯ ನಂತರವಾಗಿದೆ. ಈ ಎಲ್ಲಾ ಗುಣ ಲಕ್ಷಣಗಳು ಬ್ರಹ್ಮಾಂಡದ ಸೃಷ್ಟಿಕರ್ತನಾದ ದೇವನ ಮೂಲ

ಪರಿಕಲ್ಪನೆಯ ಬಗ್ಗೆ ನಮಗೆ ಒಂದು ಚಿತ್ರಣವನ್ನು ನೀ-ಡುತ್ತದೆ.

"ದೇವನನ್ನು ಸೃಷ್ಟಿಸಿದ್ದು ಯಾರು?" ಎಂದು ಕೆಲವರು ಕೇಳಬಹುದು. ಸೃಷ್ಟಿಕರ್ತನಾದ ದೇವನು ಅವನ ಸೃ-ಷ್ಟಿಗಳಿಗಿಂತ ಭಿನ್ನವಾಗಿದ್ದಾನೆ. ಅವನು ಸ್ಥಳ–ಕಾಲಗಳಿಗೆ ಅತೀತನಾಗಿದ್ದಾನೆ. ಸ್ಥಳ–ಕಾಲಗಳಿಗೆ ಅತೀತನಾಗಿರು-ವವನಿಗೆ ಆದಿ ಮತ್ತು ಅಂತ್ಯವಿರುವುದು ಹೇಗೆ?

2. ಬ್ರಹ್ಮಾಂಡದ ಸಮಗ್ರತೆ

ಸೃಷ್ಟಿಕರ್ತನ ಅಸ್ತಿತ್ವಕ್ಕಿರುವ ಎರಡನೆಯ ಸಾಕ್ಷ್ಯವು, ಈ ಸಂಕೀರ್ಣ ಬ್ರಹ್ಮಾಂಡದ ವ್ಯವಸ್ಥೆ ಮತ್ತು ಪರಿಪೂರ್ಣ ಸಮತೋಲನವಾಗಿದೆ. ಮೇಲ್ವಿಚಾರಣೆಯಿಲ್ಲದೆ ಕಾಕ-ತಾಳೀಯವಾಗಿ ಇಂತಹ ಒಂದು ದೊಡ್ಡ ಸಂಕೀರ್ಣ ಬ್ರಹ್ಮಾಂಡ ನಿರ್ಮಾಣವಾಗುವುದು ಮತ್ತು ನೆಲೆನಿಲ್ಲು-ವುದು ಸಾಧ್ಯವಿಲ್ಲ.

ಭೂಮಿಯ ಅನೇಕ ಲಕ್ಷಣಗಳನ್ನು ನೋಡಿದರೆ ಇಲ್ಲಿ ಜೀವವು ಅಸ್ತಿತ್ವದಲ್ಲಿರಲು ಅನುಕೂಲವಾಗುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ ಎಂದು ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಸೂರ್ಯ ಮತ್ತು ಭೂಮಿಯ ನಡುವಿನ ಅಂತರ, ಭೂಮಿಯ ಹೊರಪದರದ ದಪ್ಪ, ಭೂಮಿಯು ಸುತ್ತುವ ವೇಗ, ವಾತಾವರಣದಲ್ಲಿರುವ ಆಮ್ಲಜನಕದ ಪ್ರಮಾಣ, ಭೂಮಿ ಓರೆಯಾಗಿರುವುದು ಇತ್ಯಾದಿ. ಈ ಗಾತ್ರ, ಪ್ರಮಾಣ ಮತ್ತು ಅಳತೆಗಳಲ್ಲಿ ಸೂಕ್ಷ್ಮ ವ್ಯತ್ಯಾಸಗಳಾದರೂ ಇಲ್ಲಿ ಜೀವವು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ.

ಗಡಿಯಾರವು ನಿಖರವಾದ ಸಮಯವನ್ನು ತೋರಿಸಿಕೊಡುವಂತೆ ಮಾಡುವ ಬುದ್ಧಿವಂತ ತಯಾರಕನು ಅಸ್ತಿತ್ವದಲ್ಲಿರುವಂತಯೇ, ಸೂರ್ಯನಿಂದ ಭೂಮಿಯನ್ನು ನಿಖರವಾದ ದೂರದಲ್ಲಿರಿಸಲು ಒಬ್ಬ ನಿಯಾಮಕನಿರಲೇಬೇಕು. ಇದು ಯಾದೃಚ್ಛಿಕವಾಗಿ ಸಂಭವಿಸಲು

ಖಂಡಿತ ಸಾಧ್ಯವಿಲ್ಲ.

ಈ ಮಹಾ ಬ್ರಹ್ಮಾಂಡದಾದ್ಯಂತದ ನಿಖರವಾದ ನಿಯಮಗಳು, ಕಾನೂನುಗಳು ಮತ್ತು ವ್ಯವಸ್ಥೆಗಳು ಅಸ್ತಿತ್ವದಲ್ಲಿರುವುದನ್ನು ನಾವು ಕಾಣುತ್ತೇವೆ. ಅವೆಲ್ಲವೂ ಅವುಗಳ ಹಿಂದೆ ಒಂದು ಶ್ರೇಷ್ಠ ಬುದ್ಧಿವಂತಿಕೆಯಿದೆಂದು ಸೂಚಿಸುವುದಿಲ್ಲವೇ? ಈ 'ಬುದ್ಧಿವಂತಿಕೆ'ಯನ್ನು ಈ ಎಲ್ಲಾ ಕಾನೂನು ವ್ಯವಸ್ಥೆಗಳನ್ನು ಜಾರಿಗೆ ತಂದ ದೇವನು ಎಂದು ಉತ್ತಮವಾಗಿ ವ್ಯಾಖ್ಯಾನಿಸಬಹುದು.

ಇಸ್ಲಾಂ ಧರ್ಮವು ವೈಜ್ಞಾನಿಕ ಸಂಶೋಧನೆ ಮತ್ತು ಆಲೋಚನೆಯನ್ನು ಪ್ರೋತ್ಸಾಹಿಸುತ್ತದೆ. ದೇವನು ತನ್ನ ಸೃಷ್ಟಿಯಲ್ಲಿ ಇರಿಸಿದ ಅನೇಕ ವಿನ್ಯಾಸಗಳನ್ನು ವಿವರಿಸಲು ಮತ್ತು ಅವನ ಶಕ್ತಿ ಮತ್ತು ಬುದ್ಧಿವಂತಿಕೆಯ ವ್ಯಾಪ್ತಿಯನ್ನು ಅರಿಯಲು ವಿಜ್ಞಾನವು ನಮಗೆ ಸಹಾಯ ಮಾಡುತ್ತದೆ. ನೀರಿನ ಚಕ್ರ, ಗುರುತ್ವಾಕರ್ಷಣೆ ಮುಂತಾದ ನೈಸರ್ಗಿಕ ಜಗತ್ತಿನಲ್ಲಿ ನಾವು ಕಾಣುವ ಯಾವುದೇ

ಕಾರ್ಯವಿಧಾನ ಅಥವಾ ಪ್ರಕ್ರಿಯೆಯಂತೆಯೇ ವೈಜ್ಞಾನಿಕ ಆವಿಷ್ಕಾರಗಳಲ್ಲಿನ ಪ್ರಗತಿಗಳು ಕೂಡ ನಮಗೆ ಒಬ್ಬ ನಿರ್ಮಾಪಕ ಮತ್ತು ವಿನ್ಯಾಸಕನ ಅಸ್ತಿತ್ವಕ್ಕಿರುವ ದೃಷ್ಟಾಂತಗಳನ್ನು ಒದಗಿಸುತ್ತದೆಯೇ ವಿನಾ ದೇವವಿಶ್ವಾಸಕ್ಕೆ ವಿರುದ್ಧವಾದ ಆಧಾರವನ್ನು ಒದಗಿಸುವುದಿಲ್ಲ.

3. ದೇವನಿಂದ ಅವತೀರ್ಣವಾದ ಗ್ರಂಥಗಳು

ಮೂರನೆಯ ಸಾಕ್ಷ್ಯವು ದೇವನು ತನ್ನ ಅಸ್ತಿತ್ವದ ಸಂಕೇತವಾಗಿ ಮಾನವಕುಲಕ್ಕೆ ಕಳುಹಿಸಿದ ಅವತೀರ್ಣಗಳು.

ಕುರ್‌ಆನ್ ಇಸ್ಲಾಂ ಧರ್ಮದ ಪ್ರಮುಖ ಆಧಾರಗ್ರಂಥವಾಗಿದೆ. ದೇವನಲ್ಲಿ ನಂಬಿಕೆಯಿಡುವುದಕ್ಕಾಗಿ ದೇವನ ಸೃಷ್ಟಿಯ ಬಗ್ಗೆ ಆಲೋಚಿಸಿ, ಚಿಂತಿಸಲು ಕುರ್‌ಆನ್ ಜನರನ್ನು ಆಮಂತ್ರಿಸುತ್ತದೆ. ದೇವನು ಬ್ರಹ್ಮಾಂಡದಲ್ಲಿ ಮತ್ತು ಸ್ವತಃ ನಮ್ಮ ದೇಹದಲ್ಲಿ ಅನೇಕ ಅದ್ಭುತ ವಿನ್ಯಾಸ ಮತ್ತು ಸಂಕೀರ್ಣತೆಗಳನ್ನಿಟ್ಟಿದ್ದಾನೆ. ಇವುಗಳ

ಕಡೆಗೆ ಗಮನಹರಿಸುವಂತೆ ಕುರ್‌ಆನ್ ಅನೇಕ ಕಡೆಗಳಲ್ಲಿ ನಮಗೆ ಕರೆ ನೀಡುತ್ತದೆ. ಉದಾಹರಣೆಗೆ, ದೇವನು ಹೇಳುತ್ತಾನೆ:

> “ಖಂಡಿತವಾಗಿಯೂ, ಆಕಾಶ ಮತ್ತು ಭೂಮಿಯ ಸೃಷ್ಟಿಯಲ್ಲಿ, ರಾತ್ರಿಯ ಮತ್ತು ಹಗಲಿನ ಬದಲಾವಣೆಯಲ್ಲಿ, ಜನರಿಗೆ ಅನುಕೂಲವಾಗುವ ವಿಧದಲ್ಲಿ ಸಮುದ್ರದ ಮೂಲಕ ಸಾಗುವ ದೊಡ್ಡ ಹಡಗುಗಳಲ್ಲಿ, ಅಲ್ಲಾಹು ಮಳೆಯನ್ನು ಆಕಾಶದಿಂದ ಇಳಿಸಿ ಅದರ ಮೂಲಕ ನಿರ್ಜೀವವಾದ ಭೂಮಿಗೆ ಜೀವ ನೀಡುವುದರಲ್ಲಿ ಮತ್ತು ಅದರಲ್ಲಿ (ಭೂಮಿಯಲ್ಲಿ) ಎಲ್ಲಾ ರೀತಿಯ ಜೀವರಾಶಿಗಳನ್ನು ವ್ಯಾಪಿಸಿರುವುದಲ್ಲಿ, ಗಾಳಿಯ ನಿಯಂತ್ರಣದಲ್ಲಿ ಮತ್ತು ಆಕಾಶ ಹಾಗೂ ಭೂಮಿಯ ನಡುವೆ ನಿಯಂತ್ರಿಸಲ್ಪಡುವ ಮೋಡಗಳ ಚಲನೆಯಲ್ಲಿ ಬುದ್ಧಿ ಬಳಸುವ ಜನರಿಗೆ ಅನೇಕ ದೃಷ್ಟಾಂತಗಳಿವೆ.” (ಕುರ್‌ಆನ್ 2:164)

ಕುರ್‌ಆನ್ ದೇವನ ವಚನಗಳಾಗಿವೆ ಎನ್ನುವುದಕ್ಕೆ ಇವು ಸ್ಪಷ್ಟ ಚಿಹ್ನೆಗಳಾಗಿವೆ.

ಕುರ್‌ಆನ್

- ಕುರ್‌ಆನ್ ದೋಷಗಳು ಅಥವಾ ವಿರೋಧಾಭಾಸಗ-ಳಿಂದ ಸಂಪೂರ್ಣ ಮುಕ್ತವಾಗಿದೆ.
- ಇತರ ಧರ್ಮಗ್ರಂಥಗಳಿಗೆ ಭಿನ್ನವಾಗಿ, ಇದರ ಅವ-ತೀರ್ಣ ಕಾಲದಿಂದ ತೊಡಗಿ ಇಂದಿನ ತನಕ ಮೂಲ ಅರೇಬಿಕ್ ಭಾಷೆಯಲ್ಲಿಯೇ ಇದನ್ನು ಪದಾನುಪದ ಸಂರಕ್ಷಿಸಲಾಗಿದೆ.
- ಲಕ್ಷಾಂತರ ಜನರು ಇದನ್ನು ಈಗಲೂ ಸಂಪೂರ್ಣ ಕಂಠಪಾಠ ಮಾಡಿದ್ದಾರೆ.
- ಇದು ಮಾನವ ಬುದ್ಧಿ ಮತ್ತು ಸರ್ವಶಕ್ತ ದೇವನ ಬಗ್ಗೆ-ಯಿರುವ ಅಂತರ್ಗತ ನಂಬಿಕೆಗಳನ್ನು ಆಕರ್ಷಿಸುವಂ-

ತಹ ಸರಳ, ಶುದ್ಧ ಮತ್ತು ಸಾರ್ವತ್ರಿಕ ಸಂದೇಶವನ್ನು ಹೊಂದಿದೆ.

- ಇದು 1400 ವರ್ಷಗಳಿಗಿಂತಲೂ ಹಿಂದಿನದಾಗಿದ್ದೂ, ಆ ಕಾಲದ ಜನರಿಗೆ ತಿಳಿದಿಲ್ಲದ ಮತ್ತು ತೀರಾ ಇತ್ತೀಚೆಗೆ ವಿಜ್ಞಾನಿಗಳು ಕಂಡುಹಿಡಿದ ಅನೇಕ ವೈಜ್ಞಾನಿಕ ಸಂಗತಿಗಳನ್ನು ಹೊಂದಿದೆ. ಉದಾಹರಣೆಗೆ: ನೀರು ಎಲ್ಲಾ ಜೀವಿಗಳ ಮೂಲವಾಗಿದೆ (ಕುರ್‌ಆನ್ 21:30), ವಿಸ್ತರಿಸುತ್ತಿರುವ ಬ್ರಹ್ಮಾಂಡ (ಕುರ್‌ಆನ್ 51:47), ಸೂರ್ಯ ಮತ್ತು ಚಂದ್ರನ ಪ್ರತ್ಯೇಕ ಕಕ್ಷೆಗಳು (ಕುರ್‌ಆನ್ 21:33) ಇತ್ಯಾದಿ.

- ಇದು ಆ ಕಾಲದ ಜನರಿಗೆ ತಿಳಿದಿಲ್ಲದ ಅನೇಕ ಐತಿಹಾಸಿಕ ಸಂಗತಿಗಳನ್ನು ಮತ್ತು ಸತ್ಯವಾಗಿ ಪರಿಣಮಿಸಿದ ಹಲವಾರು ಪ್ರವಾದನೆಗಳನ್ನು ಒಳಗೊಂಡಿದೆ.

- ಇದು ಜನರ ಮೇಲೆ ಆಳವಾದ ಮತ್ತು ಚಲನಾತ್ಮಕ

ಪರಿಣಾಮವನ್ನು ಹೊಂದಿದೆ.

ದೇವನ ಬಗ್ಗೆ ಪ್ರಶ್ನೆಗಳು

1. "ದೇವರು ನಮ್ಮನ್ನು ಏಕೆ ಸೃಷ್ಟಿಸಿದನು?"

ನಮ್ಮ ದೇಹದ ಅಂಗಗಳಾದ ಕಣ್ಣು, ಕಿವಿ, ಮಿದುಳು ಮತ್ತು ಹೃದಯಗಳಿಗೆ ಒಂದು ಉದ್ದೇಶವಿದೆ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಹಾಗಾದರೆ ಇವೆಲ್ಲವನ್ನೂ ಒಳಗೊಂಡಿರುವ ಮನುಷ್ಯನಿಗೆ ಒಂದು ಉದ್ದೇಶವಿ-ಲ್ಲವೇ? ಸರ್ವಜ್ಞನಾದ ದೇವನು ಯಾವುದೇ ಗೊತ್ತು–ಗುರಿಯಿಲ್ಲದೆ ಅಲೆದಾಡಲು ಅಥವಾ ಮೂಲಭೂತ ಬಯಕೆ ಮತ್ತು ಆಸೆಗಳನ್ನು ಪೂರೈಸಿ ಜಾನುವಾರು-ಗಳಂತೆ ಜೀವಿಸಲು ನಮ್ಮನ್ನು ಸೃಷ್ಟಿಸಲಿಲ್ಲ. ಬದಲಾಗಿ, ಈ ಜೀವನವು ಒಂದು ಪರೀಕ್ಷೆಯಾಗಿದೆ. ದೇವನನ್ನು ಅಂಗೀಕರಿಸಿ ಅವನ ಮಾರ್ಗದರ್ಶನವನ್ನು ಯಾರು ಅನುಸರಿಸುತ್ತಾರೆ ಎಂದು ಪ್ರತಿಯೊಬ್ಬ ವ್ಯಕ್ತಿಯನ್ನು

ಪರೀಕ್ಷಿಸಲಾಗುತ್ತಿದೆ. ದೇವನು ಹೇಳುತ್ತಾನೆ:

> "ಖಂಡಿತವಾಗಿಯೂ, ನಾವು ಮನುಷ್ಯನನ್ನು ಸಮ್ಮಿಶ್ರ ವೀರ್ಯಕೋಶದಿಂದ ಸೃಷ್ಟಿಸಿದೆವು. ಅವನನ್ನು ಪರೀಕ್ಷಿಸುವ ಸಲುವಾಗಿ. ನಾವು ಅವನಿಗೆ ಶ್ರವಣ ಮತ್ತು ದೃಷ್ಟಿಯನ್ನು ಕೊಟ್ಟೆವು. ಖಂಡಿತವಾಗಿಯೂ, ನಾವು ಅವನಿಗೆ ಒಂದು ದಾರಿಯನ್ನೂ ತೋರಿಸಿಕೊಟ್ಟೆವು. ಅವನಿಗೆ ಕೃತಜ್ಞನಾಗಿ ಜೀವಿಸಬಹುದು ಅಥವಾ ಕೃತಘ್ನನಾಗಿಯೂ ಜೀವಿಸಬಹುದು." (ಕುರ್‌ಆನ್ 76:2-3)

ಅನೇಕ ಜನರಿಗೆ, ಮುಖ್ಯ ಸಮಸ್ಯೆಯು ದೇವನಲ್ಲಿ ನಂಬಿಕೆ ಇಡಬೇಕೋ ಬೇಡವೋ ಎನ್ನುವುದಲ್ಲ. ಬದಲಾಗಿ, ದೇವನಲ್ಲಿ ನಂಬಿಕೆಯಿಟ್ಟ ನಂತರದ ಪರಿಣಾಮದ ಬಗ್ಗೆಯಾಗಿದೆ. ಅಂದರೆ, ದೇವನಲ್ಲಿ ನಂಬಿಕೆಯಿಟ್ಟರೆ ನಂತರ ಅವನ ನಿರ್ದೇಶನದಂತೆ ಜೀವನ

ಸಾಗಿಸಬೇಕಾಗುತ್ತದೆ. ಇದು ಅವರಿಗೆ ಅವರ ಇಷ್ಟದಂತೆ ಜೀವಿಸುವುದಕ್ಕೆ ತೊಡಕಾಗುತ್ತದೆ. ಆದ್ದರಿಂದ, ನಮ್ಮ ಸ್ವಂತ ಇಚ್ಛೆ, ಆಸೆ ಮತ್ತು ಅಹಂಗಿಂತಲೂ ದೇವನ ಇಚ್ಛೆಗೆ ಪ್ರಾಮುಖ್ಯತೆ ನೀಡಿ ಅವನ ಮುಂದೆ ವಿನಮ್ರತೆ ಪ್ರಕಟಿಸಿ ಅವನನ್ನು ಅನುಸರಿಸುವುದಕ್ಕೆ ನಾವು ಆದ್ಯತೆ ನೀಡುತ್ತೇವೋ ಇಲ್ಲವೋ ಎನ್ನುವುದನ್ನು ಕೂಡ ಈ ಜೀವನದ ಪರೀಕ್ಷೆಯು ಒಳಗೊಂಡಿದೆ.

2. "ದೇವನು ನಮ್ಮನ್ನು ಏಕೆ ಪರೀಕ್ಷಿಸಬೇಕು?"

ದೇವನಿಗೆ ಯಾವುದೂ ಅಗತ್ಯವಿಲ್ಲ. ಅವನಿಗೆ ಏನನ್ನೂ ಸೃಷ್ಟಿಸುವ ಅಗತ್ಯವಿಲ್ಲ ಮತ್ತು ಯಾರನ್ನೂ ಪರೀಕ್ಷಿ-ಸುವ ಅಗತ್ಯವಿಲ್ಲ. ನಮ್ಮ ನಂಬಿಕೆಯಿಂದ ಅವನಿಗೆ ಯಾವುದೇ ಲಾಭವಿಲ್ಲ ಮತ್ತು ನಮ್ಮ ನಿಷೇಧದಿಂದ ಅವನಿಗೆ ಯಾವುದೇ ನಷ್ಟವಿಲ್ಲ. ಬದಲಾಗಿ, ಅವನು ನಮ್ಮನ್ನು ಸೃಷ್ಟಿಸಿದ್ದು ಮತ್ತು ನಮ್ಮನ್ನು ಪರೀಕ್ಷಿಸುವು-ದು ನಮ್ಮದೇ ಒಳಿತಿಗಾಗಿದೆ. ನಾವು ಶಾಲೆಯಲ್ಲಿ ಪರೀಕ್ಷೆ

ಬರೆಯುವುದು ಶಾಲೆಯ ಒಳಿತಿಗಾಗಿ ಅಲ್ಲ. ದೇವನಿಗೆ ಭವಿಷ್ಯದ ಬಗ್ಗೆ ತಿಳಿದಿದೆ. ನಿಜವಾಗಿ ಹೇಳುವುದಾದರೆ, ನಾವು ನಮ್ಮ ಜೀವನವನ್ನು ಹೇಗೆ ಅನುಭವಿಸುತ್ತೇವೆ ಮತ್ತು ನಮ್ಮ ಆಯ್ಕೆ ಹೇಗಿರುತ್ತದೆ ಎನ್ನುವುದರ ಮೇಲೆ ನಿರ್ಧಾರವಾಗುವುದು ನಮ್ಮ ಲಾಭ–ನಷ್ಟಗಳಾಗಿವೆ-ಯೇ ಹೊರತು ದೇವನದ್ದಲ್ಲ.

3. "ನಮಗೆ ನಿಜವಾಗಿಯೂ ಆಯ್ಕೆ ಇದೆಯೇ?"

ನಾವು ಯಾವುದನ್ನು ಆಯ್ಕೆ ಮಾಡುತ್ತೇವೆ? ಒಳಿತಿನ ಮಾರ್ಗವನ್ನೋ ಅಥವಾ ಕೆಡುಕಿನ ಮಾರ್ಗವನ್ನೋ? ಇದು ಈಗಾಗಲೇ ದೇವನಿಗೆ ತಿಳಿದಿದೆ ಎಂಬ ಅಂಶವು ನಮ್ಮ ಆಯ್ಕೆಯ ಸ್ವಾತಂತ್ರ್ಯವನ್ನು ದಮನಿಸುವುದಿ-ಲ್ಲ. ಜನರು ತನ್ನಲ್ಲಿ ನಂಬಿಕೆಯಿಡಬೇಕೆಂಬ ಬಯಕೆ ದೇವನಿಗಿದೆ. ಆದರೆ ಅವನು ಅದಕ್ಕಾಗಿ ಯಾರನ್ನೂ ಒತ್ತಾಯಿಸುವುದಿಲ್ಲ.

ದೇವನು ಬಯಸಿದರೆ, ಮಾನವಕುಲವನ್ನು ಸಂಪೂರ್ಣವಾಗಿ ತನ್ನಲ್ಲಿ ನಂಬಿಕೆಯಿಡುವವರನ್ನಾಗಿ ಮಾಡಲು ಅವನಿಗೆ ಸಾಧ್ಯವಿದೆ. ಏಕೆಂದರೆ ಅವನಿಗೆ ಎಲ್ಲದರ ಮೇಲೂ ಅಧಿಕಾರವಿದೆ. ಆದರೆ ಅವನ ಯುಕ್ತಿಯ ಪ್ರಕಾರ, ಅವನು ನಮಗೆ ಆಯ್ಕೆ ಮಾಡುವ ಸಾಮರ್ಥ್ಯವನ್ನು ನೀಡಿಯೇ ಸೃಷ್ಟಿಸಿದ್ದಾನೆ. ನಮ್ಮ ಆಯ್ಕೆಗಳಿಗೆ ನಮ್ಮನ್ನೇ ಹೊಣೆಗಾರರನ್ನಾಗಿ ಮಾಡಿದ್ದಾನೆ. ಈ ಜಗತ್ತಿನಲ್ಲಿ ಸಂಭವಿಸಲು ದೇವನು ಅನುಮತಿಸುವ ಎಲ್ಲದರ ಬಗ್ಗೆಯೂ ಅವನು ಸಂತೋಷವಾಗಿರಬೇಕೆಂದಿಲ್ಲ.

4. "ದೇವನು ಸ್ವತಃ ತನ್ನನ್ನು ಏಕೆ ಪ್ರಕಟಪಡಿಸುವುದಿಲ್ಲ?"

ದೇವನ ಯುಕ್ತಿಯ ಪ್ರಕಾರ, ಸೃಷ್ಟಿಗಳು ಅವನನ್ನು ಅವನ ದೃಷ್ಟಾಂತಗಳ ಮೂಲಕ ತಿಳಿದುಕೊಳ್ಳಬೇಕಾಗಿದೆ. ಇದು ಈ ಜೀವನದ ಪರೀಕ್ಷೆಯ ಒಂದು ಭಾಗವಾಗಿದೆ. ಅವನನ್ನು ಅಂಗೀಕರಿಸಲು ಅವನು ನಮಗೆ

ಕೊಟ್ಟಿರುವ ಸಾಮರ್ಥ್ಯಗಳನ್ನು ಬಳಸಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ. ಯಾರು ಪ್ರಾಮಾಣಿಕ ಮನಸ್ಸಿನಿಂದ, ವಿನಮ್ರತಾ ಭಾವದಿಂದ, ದೇವನ ಬಗ್ಗೆ ಆಳವಾಗಿ ಆಲೋಚನೆ ಮಾಡುತ್ತಾರೋ ಅವರು ಅವನನ್ನು ಗುರುತಿಸುತ್ತಾರೆ ಮತ್ತು ಅವನಲ್ಲಿ ನಂಬಿಕೆಯಿಡುತ್ತಾರೆ.

5. "ಜಗತ್ತಿನಲ್ಲಿ ಯಾಕೆ ದುಃಖವಿದೆ?"

ವಿಭಿನ್ನ ಜನರನ್ನು ವಿಭಿನ್ನ ರೀತಿಯಲ್ಲಿ ವಿಭಿನ್ನ ಪರೀಕ್ಷೆಗಳ ಮೂಲಕ ಪರೀಕ್ಷಿಸಲಾಗುತ್ತದೆ ಎನ್ನುವುದು ಸತ್ಯ. ಕೆಲವರಿಗೆ ಐಶ್ವರ್ಯ ನೀಡಿ ಪರೀಕ್ಷಿಸಲಾದರೆ ಕೆಲವರಿಗೆ ಬಡತನ ನೀಡಿ ಪರೀಕ್ಷಿಸಲಾಗುತ್ತದೆ. ಕೆಲವರಿಗೆ ಆರೋಗ್ಯ ನೀಡಿ ಪರೀಕ್ಷಿಸಲಾದರೆ ಕೆಲವರಿಗೆ ಅನಾರೋಗ್ಯ ನೀಡಿ ಪರೀಕ್ಷಿಸಲಾಗುತ್ತದೆ. ಈ ಜಗತ್ತಿನಲ್ಲಿ ಕೆಲವರು ಸರ್ವಾಧಿಕಾರಿಗಳಂತೆ ವರ್ತಿಸಿ ಜನರ ಮೇಲೆ ದಬ್ಬಾಳಿಕೆ ಮಾಡುತ್ತಾರೆ. ಕೆಲವರು ದಿನನಿತ್ಯ

ನರಕಯಾತನೆ ಅನುಭವಿಸುತ್ತಾರೆ. ದುಷ್ಟರು ಮತ್ತಷ್ಟು ದುಷ್ಟತನ ತೋರುತ್ತಾರೆ. ಶೋಷಿತರು ಮತ್ತಷ್ಟು ಶೋಷಣೆಗೆ ಒಳಗಾಗುತ್ತಾರೆ. ಈ ವಿದ್ಯಮಾನವನ್ನು ಕಾಣುವಾಗ ಕೆಲವರು ದೇವನ ಬಗ್ಗೆ ಸಂಶಯವಾಗುತ್ತದೆ. ದೇವನೊಬ್ಬ ಇರುತ್ತಿದ್ದರೆ ಹೀಗಾಗುತ್ತಿರಲಿಲ್ಲ ಎನ್ನುತ್ತಾರೆ.

ಆದರೆ ವಾಸ್ತವವಾಗಿ ಇವು ದೇವನ ಅಸ್ತಿತ್ವವನ್ನು ನಿರಾಕರಿಸುವುದಿಲ್ಲ. ಅಥವಾ ಇದು ದೇವನು ಸರ್ವಶಕ್ತ ಎನ್ನುವುದಕ್ಕೆ ವಿರುದ್ಧವೂ ಅಲ್ಲ. ಬದಲಾಗಿ, ಈ ಜಗತ್ತಿನಲ್ಲಿ ದೇವನು ಸಂಭವಿಸಲು ಅನುಮತಿಸುವ ಒಳಿತು ಮತ್ತು ಕೆಡುಕುಗಳೆಲ್ಲವೂ ಭೂಮಿಯ ಮೇಲಿನ ನಮ್ಮ ಪರೀಕ್ಷೆಯನ್ನು ರೂಪಿಸುತ್ತದೆ. ನಮಗೆ ಏನು ಸಂಭವಿಸುತ್ತದೆ ಎಂಬುದನ್ನು ನಿಯಂತ್ರಿಸಲು ನಮಗೆ ಸಾಧ್ಯವಿಲ್ಲ. ಆದರೆ ನಾವು ಅವುಗಳಿಗೆ ಹೇಗೆ ಪ್ರತಿಕ್ರಿಯಿಸುತ್ತೇವೆ ಎಂಬುದನ್ನು ನಿಯಂತ್ರಿಸಲು ನಮಗೆ ಸಾಧ್ಯವಿದೆ.

ದೇವನು ಪರೀಕ್ಷಿಸುವುದು ಇದನ್ನೇ ಆಗಿದೆ.

ಈ ಜಗತ್ತು ಒಂದು ತಾತ್ಕಾಲಿಕ ಪರೀಕ್ಷಾ ಕೇಂದ್ರ ಮಾತ್ರ. ಫಲಿತಾಂಶ ಸಿಗುವುದು ಶಾಶ್ವತವಾದ ಪರಲೋಕದಲ್ಲಿ. ಈ ಪರಿಕಲ್ಪನೆಯ ಬಗ್ಗೆ ಸರಿಯಾಗಿ ಚಿಂತಿಸಿದರೆ ಈ ಜೀವನದಲ್ಲಿ ಸಂಭವಿಸುವ ಯಾವುದೇ ಅನ್ಯಾಯ ಅಥವಾ ಸಂಕಟದ ನಿಜವಾದ ಅರ್ಥವನ್ನು ಕಂಡುಕೊಳ್ಳಲು ಸಾಧ್ಯವಿದೆ.

6. “ದೇವನು ಜನರನ್ನು ಏಕೆ ಶಿಕ್ಷಿಸುತ್ತಾನೆ?”

ಶಿಕ್ಷೆ ಎಂಬ ಪರಿಕಲ್ಪನೆ ನ್ಯಾಯಪಾಲನೆಗೆ ಅತ್ಯಗತ್ಯವಾಗಿದೆ ಎನ್ನುವುದನ್ನು ಯಾರೂ ನಿರಾಕರಿಸುವುದಿಲ್ಲ. ನಾವು ಹೇಗೆ ಬದುಕಲು ಬಯಸುತ್ತೇವೆ ಎಂಬುದನ್ನು ಆಯ್ಕೆ ಮಾಡುವ ಸಾಮರ್ಥ್ಯವನ್ನು ನೀಡಿ ದೇವರು ನಮ್ಮನ್ನು ಸೃಷ್ಟಿಸಿದ್ದಾನೆ. ನಾವು ಹೇಗೆ ಬದುಕಿದೆವು ಎಂಬುದರ ಬಗ್ಗೆ ಅವನು ನಮ್ಮನ್ನು ವಿಚಾರಣೆ ಮಾಡಲಿದ್ದಾನೆ.

ದೇವನಿಗೆ ವಿಧೇಯವಾಗಿ ನಡೆಯಲು ಯಾರು ಪ್ರಾಮಾಣಿಕವಾಗಿ ಶ್ರಮಿಸುತ್ತಾರೋ ಅವರು ದೇವನ ಕರುಣೆಯನ್ನು ಗಳಿಸಿ ಶಾಶ್ವತ ಸ್ವರ್ಗವನ್ನು ಪ್ರವೇಶಿಸುತ್ತಾರೆ. ಆದರೆ ತಮ್ಮ ಜೀವನದ ಉದ್ದೇಶದ ಬಗ್ಗೆ ಅಸಡ್ಡೆ ವಹಿಸಿ ದೇವನನ್ನು ನಿರಾಕರಿಸುವವರು ಯಾರೋ, ಅವರು ಅಂತಿಮವಾಗಿ ತಮ್ಮದೇ ಆಯ್ಕೆಯ ಫಲವಾಗಿ ದೇವನ ಮುಂದೆ ವಿಚಾರಣೆಗೆ ಒಳಗಾಗಬೇಕಾಗುತ್ತದೆ. ತಮ್ಮ ಹಣೆಬರಹಕ್ಕಾಗಿ ಯಾರೂ ದೇವನನ್ನು ದೂಷಿಸಿ ಪ್ರಯೋಜನವಿಲ್ಲ. ದೇವನು ಜನರನ್ನು ಸೃಷ್ಟಿಸಿದ್ದು ಅವರನ್ನು ಶಿಕ್ಷಿಸುವುದಕ್ಕಲ್ಲ. ಬದಲಾಗಿ, ಜನರಿಗೆ ಸರಳಗೊಳಿಸಿ ಕೊಡಲು ಮತ್ತು ಕರುಣೆ ತೋರಲು ಅವನು ಬಯಸುತ್ತಾನೆ.

ಇಸ್ಲಾಂ ಧರ್ಮವು ಪ್ರಾಯೋಗಿಕ ಧರ್ಮವಾಗಿದ್ದು, ದೇವನ ಕರುಣೆಯ ಮೇಲಿನ ಭರವಸೆ ಮತ್ತು ಅವನ ಶಿಕ್ಷೆಯ ಬಗ್ಗೆಯಿರುವ ಭಯದ ನಡುವೆ ಸಮತೋಲ-

ನವನ್ನು ಕಾಯ್ದುಕೊಳ್ಳಬೇಕೆಂದು ಹೇಳುತ್ತದೆ. ಸಕಾರಾತ್ಮಕ ಮತ್ತು ವಿನಮ್ರ ಜೀವನವನ್ನು ನಡೆಸಲು ಇವೆರಡೂ ಅಗತ್ಯವಾಗಿದೆ. ದೇವರು ಅತ್ಯಂತ ಕರುಣಾಮಯಿ. ಹಾಗೆಯೇ ಅತ್ಯಂತ ನ್ಯಾಯವಂತ. ಅವನ ಕರುಣೆಯ ಮೇಲೆ ನಿರೀಕ್ಷಿಯಿಡುವಷ್ಟೇ ಅವನ ಶಿಕ್ಷೆಯ ಬಗ್ಗೆಯೂ ಭಯಪಡಬೇಕಾಗಿದೆ. ವಿಚಾರಣಾ ದಿನ ಇಲ್ಲದಿರುತ್ತಿದ್ದರೆ ದೇವನ ಸಮಗ್ರ ನ್ಯಾಯಕ್ಕೆ ಅರ್ಥವಿರುತ್ತಿರಲಿಲ್ಲ. ಮಾತ್ರವಲ್ಲ, ಇಹಲೋಕ ಜೀವನವೆಂಬುದು ಒಂದು ಅನ್ಯಾಯ ಮಾತ್ರವಾಗುತ್ತಿತ್ತು.

ಸಮಾಪ್ತಿ

ನಾವು ಈ ಭೂಮಿಯಲ್ಲಿ ಸ್ವಲ್ಪ ಕಾಲ ಬದುಕಿ ಸಾಯುತ್ತೇವೆ. ನಂತರ ಏನಾಗುತ್ತದೆ? ನಮ್ಮ ಬದುಕು ಅಲ್ಲಿಗೇ ಕೊನೆಗೊಳ್ಳುತ್ತದೆಯೇ? ಅಥವಾ ನಮ್ಮ ಬದುಕಿಗೆ ಇನ್ನೂ ಹೆಚ್ಚಿನದ್ದು ಏನಾದರೂ ಇದೆಯೇ? ನಾವು ಅಂತಿಮ ಉದ್ದೇಶವಿಲ್ಲದ ಸುಧಾರಿತ ಮಂಗಗಳೇ?

ಅಥವಾ ನಾವು ಕೇವಲ ಭೌತಿಕ ಅಗತ್ಯಗಳನ್ನು ಪೂರೈಸಲು ಬಂದಿರುವ ಜಾನುವಾರುಗಳೇ?

ಯಾರು ಅಪ್ಪಟ ಮನಸ್ಥಿತಿಯನ್ನು ಹೊಂದಿದ್ದು ಇನ್ನೂ ದೇವನ ಬಗ್ಗೆ ಒಂದು ಸ್ಪಷ್ಟ ತೀರ್ಮಾನಕ್ಕೆ ಬಂದಿಲ್ಲವೋ, ಅವರು “ದೇವನೇ, ನೀನು ನಿಜವಾಗಿಯೂ ಅಸ್ತಿತ್ವದ-ಲ್ಲಿದ್ದರೆ, ದಯವಿಟ್ಟು ನನಗೆ ಮಾರ್ಗದರ್ಶನ ಮಾಡು” ಎಂದು ಪ್ರಾಮಾಣಿಕವಾಗಿ ಪ್ರಾರ್ಥಿಸಬೇಕೆಂದು ನಾವು ಸಲಹೆ ನೀಡುತ್ತೇವೆ. ಇದರ ಫಲಿತಾಂಶವನ್ನು ಕಂಡು ನಿಮಗೆ ಖಂಡಿತ ಆಶ್ಚರ್ಯವಾಗಬಹುದು!

ನಮ್ಮ ಇತರ ಲೇಖನಗಳಿಗೆ ಸಂದರ್ಶಿಸಿ:

bit.ly/msi_all

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014

MOB: 9731593091 / 9945171612

Jamiyathe Ahle Hadees Mangalore